ಒಬ್ಬ ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷರೆ, ಸದನವನ್ನು ಬೆಳಗ್ಗೆ 10.00 ಗಂಟೆಗೆ ಪ್ರಾರಂಭಿಸಿ ಎರಡು ಗಂಟೆಗಳ ಕಾಲ ಪ್ರಶ್ನೋತ್ತರ ಅವಧಿ ನಡೆಸಿ.

ಅಧ್ಯಕ್ಷರು : ಆಯಿತು, ಆಯಿತು, ಮಾಡೋಣ. ನಾನು ಪ್ರಶ್ನೋತ್ತರ ಅವಧಿಯನ್ನು ಹೆಚ್ಚಿಗೆ ಮಾಡುವುದಿಲ್ಲ. ಅದರಲ್ಲೇ ನೀವು ಕಂಟ್ರೋಲ್ ಮಾಡಿಕೊಳ್ಳಬೇಕು.

ಸರ್ವ ಶಿಕ್ಷಣ ಅಭಿಯಾನದಡಿಯಲ್ಲಿ ಮಂಜೂರಾದ ಶಾಲೆಗಳು

32(146) **ಶ್ರೀ ಗೋಪಾಲ ಕೃಷ್ಣ ಎನ್.ವೈ (ಮೊಳಕಾಲ್ಮೂರು)**:– ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(1) ಮೊಳಕಾಲ್ಮೂರು ಕ್ಷೇತ್ರದಲ್ಲಿ ಸರ್ವ ಶಿಕ್ಷಣ ಅಭಿಯಾನದಡಿಯಲ್ಲಿ ಮಂಜೂರಾದ ಶಾಲೆಗಳೆಷ್ಟು (ಮೂರು ವರ್ಷಗಳ ಮಾಹಿತಿ ನೀಡುವುದು)

(2) ಈ ಶಾಲೆಗಳನ್ನು ನಿರ್ಮಿಸಲು ತಗುಲಿದ ಒಟ್ಟು ವೆಚ್ಚವೆಷ್ಟು (ಮಾಹಿತಿ ನೀಡುವುದು) ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : (1) ಮೊಳಕಾಲ್ಮೂರು ಕ್ಷೇತ್ರದಲ್ಲಿ ಸರ್ವ ಶಿಕ್ಷಣ ಅಭಿಯಾನದ ಅಡಿಯಲ್ಲಿ ಮಂಜೂರಾದ ಶಾಲೆಗಳ ವಿವರ ಕೆಳಕಂಡಂತಿದೆ.

2005–06 – 01 ಶಾಲೆ

2006–07 – 00

2007–08 – 04 ಶಾಲೆಗಳು

(2)

ವರ್ಷ	ಹೊಸ ಶಾಲಾ ಕಟ್ಟಡ	
	ಭೌತಿಕ	ಆರ್ಥಿಕ (ಲಕ್ಷ ರೂ.ಗಳಲ್ಲಿ)
2005–06	1	4.100
2006–07	0	0.000
2007–08	4	25.320
ಒಟ್ಟು	5	29.420

ಶ್ರೀ ನೆ.ಲ. ನರೇಂದ್ರಬಾಬು (ಮಹಾಲಕ್ಷ್ಮಿ ಬಡಾವಣೆ) (ಶ್ರೀ ಎನ್.ವೈ. ಗೋಪಾಲ ಕೃಷ್ಣ (ಮೊಳಕಾಲ್ಮೂರು) ಅವರ ಪರವಾಗಿ) : ಮಾನ್ಯ ಅಧ್ಯಕ್ಷರೆ, ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಉತ್ತರ ಕೊಟ್ಟಿದ್ದಾರೆ. ನಾನು ಸದಸ್ಯರಾದ ಎನ್.ವೈ. ಗೋಪಾಲಕೃಷ್ಣರವರ ಮೊಳಕಾಲ್ಮೂರು ಕ್ಷೇತ್ರದಲ್ಲಿ ಅವರ ಜೊತೆ ಹಲವಾರು ಬಾರಿ ಪರ್ಯಟನೆ ಮಾಡಿದ್ದೇನೆ. ಆದರೂ ಸಹ ಅಲ್ಲಿ ಕಂಡಿರುವುದೇನೆಂದರೆ, ಸರ್ವ ಶಿಕ್ಷಣ ಅಭಿಯಾನದ ಮೂಲ ಉದ್ದೇಶ, ಸರ್ವರಿಗೂ ಶಿಕ್ಷಣ ಒದಗಿಸಿಕೊಡಬೇಕೆನ್ನುವುದೇ ಆಗಿದೆ. ಈ ಉದ್ದೇಶದಿಂದ 2002ರಲ್ಲಿ ಆರಂಭವಾದ ಈ ಅಭಿಯಾನದ ಅಡಿಯಲ್ಲಿ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಶಾಲೆಗಳಿಗೆ ಸಂಬಂಧಿಸಿದಂತೆ ಕನಿಷ್ಠ ಮೂಲಭೂತ ಸೌಕರ್ಯ ಮತ್ತು ಇನ್ನಿತರ ಸೌಕರ್ಯಗಳನ್ನು ಒದಗಿಸಿಕೊಡಬೇಕೆಂಬ ಉದ್ದೇಶದಿಂದ ಆರಂಭಿಸಲಾಯಿತು. ನಾನು ಸಚಿವರನ್ನು ಕೇಳುವುದಕ್ಕೆ ಬಯಸುತ್ತೇನೆ. ಆ ಕ್ಷೇತ್ರದಿಂದ ಬಯಸಿರತಕ್ಕ ಶಾಲಾ ಕಟ್ಟಡಗಳು, ಸರ್ಕಾರಿ ಜಮೀನು ಬಹಳಷ್ಟು ಒತ್ತುವರಿಯಾಗುತ್ತಿದೆ. ಈ ದೃಷ್ಟಿಯಿಂದ ಶಾಲೆಗಳಿಗೆ ಕಾಂಪೌಂಡ್ ಹಾಕುವುದಕ್ಕೆ ಒಂದು ಪ್ರಸ್ತಾವನೆಯನ್ನು, ಬೇಡಿಕೆಗಳನ್ನು ಸಲ್ಲಿಸಲಾಗಿತ್ತು. ಆದರೆ, ಇದುವರೆಗೂ ಅದು ಈಡೇರಿಲ್ಲ. ಕೇವಲ 12 ಮಾತ್ರ ಆಗಿದೆ. 126 ಪೆಂಡಿಂಗ್ ಇದೆ. ಇವತ್ತು ಅಲ್ಲಿನ ಸ್ಥಳೀಯ ಶಾಸಕರು ಗಮನಕ್ಕೆ ತಂದರೂ ಯಾವುದೇ ಪ್ರಯೋಜನವಾಗಿಲ್ಲ. ಮತ್ತು ಶೌಚಾಲಯಗಳೂ ಅಷ್ಟೇ. ಹೆಣ್ಣು ಮಕ್ಕಳಿಗಾಗಲಿ, ಗಂಡು ಮಕ್ಕಳಿಗಾಗಲಿ, ಇವತ್ತು ಶೌಚಾಲಯಗಳಿಲ್ಲ. ಇನ್ನು ಕುಡಿಯುವ ನೀರು – ಕನಿಷ್ಠ ಕುಡಿಯುವ ನೀರಿಗೆ ಸಂಬಂಧಪಟ್ಟ ಹಾಗೆ ಇನ್ನು ಕೂಡ 30 ಶಾಲೆಗಳು ಬ್ಯಾಲೆನ್ಸ್ ಉಳಿದಿದೆ. ನೀರು ಎಷ್ಟು ಅಮೂಲ್ಯ ಎಂಬುದು ನಿಮಗೆ ಗೊತ್ತು.

ಅಧ್ಯಕ್ಷರು : ನರೇಂದ್ರಬಾಬುರವರೆ ನೇರವಾಗಿ ಪ್ರಶ್ನೆ ಕೇಳಿ. ಈ ರೀತಿ ಭಾಷಣ ಮಾಡಿದರೆ ಇದಕ್ಕೇ ಸಾಕಷ್ಟು ಸಮಯ ಹಿಡಿಯುತ್ತದೆ. ತಾವು ನೇರವಾಗಿ ಪ್ರಶ್ನೆ ಕೇಳಿ. ನಿಮಗೆ ಏನು ಉತ್ತರ ಬೇಕೆಂದು ಪ್ರಶ್ನೆ ಕೇಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಶ್ರೀಯುತ ಗೋಪಾಲಕೃಷ್ಣ ಪರವಾಗಿ ಮಾನ್ಯ ನರೇಂದ್ರಬಾಬುರವರು ಏನು ಪ್ರಶ್ನೆ ಕೇಳುತ್ತಿದ್ದಾರೆ, ಅದು ಪ್ರತ್ಯೇಕ ಪ್ರಶ್ನೆಯಾಗುತ್ತದೆ. ಅವರು ಕೇಳುವುದೇನೆಂದರೆ, ಕಾಂಪೌಂಡ್, ಶೌಚಾಲಯ, ಕುಡಿಯುವ ನೀರು, ಇದೆಲ್ಲವೂ ಪ್ರತ್ಯೇಕವಾದ ವಿಷಯಗಳಾಗುತ್ತವೆ. ಆದರೆ, ಮೊಳಕಾಲ್ಮೂರು ಕ್ಷೇತ್ರದಲ್ಲಿ ಸರ್ವ ಶಿಕ್ಷಣ ಅಭಿಯಾನ ಯೋಜನೆಯಡಿಯಲ್ಲಿ

ಮಂಜೂರಾದ ಶಾಲೆಗಳು ಎಷ್ಟೆಂದು ಕೇಳಿರುವುದಕ್ಕೆ ನಾನು ವರ್ಷವಾರು ವಿವರಗಳನ್ನು ಒದಗಿಸಿಕೊಟ್ಟಿದ್ದೇನೆ. 2005ರಲ್ಲಿ 1, 2007–08ರಲ್ಲಿ 4 ಶಾಲೆಗಳೆಂದು ವಿವರ ಕೊಟ್ಟಿದ್ದೇನೆ. ಮತ್ತು ಈ ಶಾಲೆಗಳನ್ನು ನಿರ್ಮಿಸುವುದಕ್ಕೆ ಎಷ್ಟು ವೆಚ್ಚವಾಗಿದೆ ಎಂದು ಕೇಳಿರುವುದಕ್ಕೆ 2005–06ರಲ್ಲಿ 1 ಶಾಲೆಯನ್ನು ನಾಲ್ಕು ಲಕ್ಷ ರೂಪಾಯಿಗಳಲ್ಲಿ ನಿರ್ಮಿಸಿದ್ದೇವೆ. 2007–08ನೇ ಸಾಲಿನಲ್ಲಿ 4 ಶಾಲೆಗಳನ್ನು 25 ಲಕ್ಷ ರೂಪಾಯಿಗಳಲ್ಲಿ ನಾವು ಕಟ್ಟಡ ಕಟ್ಟಿಕೊಟ್ಟಿದ್ದೇವೆ. ಆದರೆ, ಮಾನ್ಯ ಶಾಸಕರು ಕೇಳಿದಂತೆ, ಅನೇಕ ಶಾಲೆಗಳಲ್ಲಿ ಕಾಂಪೌಂಡ್, ಶೌಚಾಲಯ, ಕುಡಿಯುವ ನೀರು, ಈ ರೀತಿಯಾಗಿ ಪಂಚ ಸೌಲಭ್ಯಗಳ ಕೊರತೆಗಳಿವೆ. ಆ ಕೊರತೆಗಳನ್ನು ನೀಗಿಸುವುದಕ್ಕೆ ಸರ್ವ ಶಿಕ್ಷಣ ಅಭಿಯಾನ ಯೋಜನೆ ಒಳಗೊಂಡಂತೆ ಬೇರೆ ಬೇರೆ ಯೋಜನೆಗಳಡಿಯಲ್ಲಿ ನಾವು ಸರ್ಕಾರದಿಂದ ಪ್ರಯತ್ನ ಮಾಡುತ್ತಿದ್ದೇವೆ. ಇದಕ್ಕೆ ಸಂಬಂಧಿಸಿದಂತೆ ಅವರು ಪ್ರತ್ಯೇಕ ಪ್ರಶ್ನೆ ಕೇಳಿದರೆ ಇನ್ನೂ ಹೆಚ್ಚಿನ ವಿವರಗಳನ್ನು ನೀಡಲಾಗುತ್ತದೆ.

ಶ್ರೀ ನೆ.ಲ. ನರೇಂದ್ರಬಾಬು : ಮಾನ್ಯ ಅಧ್ಯಕ್ಷರೆ, ಸಚಿವರನ್ನು ತಮ್ಮ ಮುಖೇನ ವಿನಂತಿಸಿಕೊಳ್ಳುವುದೇನೆಂದರೆ, ಕುಡಿಯುವ ನೀರು, ಶೌಚಾಲಯ, ಕಾಂಪೌಂಡ್, ಇವುಗಳನ್ನು ಒದಗಿಸಿಕೊಡುವ ಭರವಸೆಯನ್ನು ತಾವು ಕೊಡಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಆದ್ಯತೆ ಮೇರೆಗೆ ಸರ್ಕಾರದಲ್ಲಿ ಎಲ್ಲಾ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಶಾಲೆಗಳಲ್ಲೂ ಈ ಪಂಚ ಸೌಲಭ್ಯಗಳು ಅಂದರೆ, ಕುಡಿಯುವ ನೀರು, ಶೌಚಾಲಯ ಒಳಗೊಂಡಂತೆ ಕೊಠಡಿಗಳು ಅಲ್ಲಿ ಡೆಸ್ಕ್, ಬೆಂಚ್‌ಗಳಿಂದಿಡಿದು ಕಾಂಪೌಂಡ್, ಕ್ರೀಡಾಂಗಣ ಎಲ್ಲವನ್ನೂ ಸಹ ಆದ್ಯತೆ ಮೇಲೆ ನಮ್ಮ ರಾಜ್ಯದ ಎಲ್ಲಾ ಶಾಲೆಗಳಲ್ಲೂ ಸಹ ಸರ್ವ ಶಿಕ್ಷಣ ಅಭಿಯಾನ ಯೋಜನೆಯಡಿಯಲ್ಲಿ ಕೇಂದ್ರ ಸರ್ಕಾರದಿಂದ ಹಿಂದಿನಕ್ಕಿಂತಲೂ ಹೆಚ್ಚಿನ ಹಣ ಅಂದರೆ, ಸುಮಾರು 250 ಕೋಟಿ ರೂಪಾಯಿಗಿಂತಲೂ ಹೆಚ್ಚು ಹಣ ತೆಗೆದುಕೊಂಡಿದ್ದೇವೆ. ಹಾಗಾಗಿ, ಆದ್ಯತೆ ಮೇರೆಗೆ ಈ ರೀತಿ ಮೂಲಭೂತ ಸೌಕರ್ಯಗಳನ್ನು ದೊರಕಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

ಇನ್ನೊಂದು ವಿಷಯವೇನೆಂದರೆ, ನಾನು ಈ ಸದನದ ಮೂಲಕ ತಮ್ಮೆಲ್ಲರಲ್ಲೂ ವಿನಂತಿಸಿಕೊಳ್ಳುತ್ತೇನೆ. ದತ್ತಕ ಯೋಜನೆಯು 2001ರಿಂದ ಕರ್ನಾಟಕದಲ್ಲಿ ಜಾರಿಯಲ್ಲಿದೆ. ಆ ಯೋಜನೆಯನ್ನೂ ಸಹ ನಾವು ನಮ್ಮ ನಮ್ಮ ಕ್ಷೇತ್ರಗಳಲ್ಲಿರುವ

ಶಾಲೆಗಳಲ್ಲಿ ಈ ರೀತಿಯಲ್ಲಿ ಮೂಲಭೂತ ಸೌಕರ್ಯಗಳನ್ನು ಹೆಚ್ಚಿಸುವುದಕ್ಕೆ ಆ ಯೋಜನೆಯನ್ನೂ ಅಳವಡಿಸಿಕೊಳ್ಳುವುದಕ್ಕೆ ಎಲ್ಲರ ಸಹಕಾರ ಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಮಹಿಳಾ ಪದವಿ ಪೂರ್ವ ಕಾಲೇಜು ಕಟ್ಟಡ

33 (151) **ಶ್ರೀ ಪ್ರತಾಪ ಗೌಡ ಪಾಟೀಲ್ (ಮಸ್ಕಿ)** :– ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ–

(ಅ) ಮಸ್ಕಿಯ ಮಹಿಳಾ ಪದವಿ ಪೂರ್ವ ಕಾಲೇಜು ಕಟ್ಟಡದ ಕೆಲಸ ಪ್ರಾರಂಭವಾಗದಿರಲು ಕಾರಣವೇನು ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :–

(ಅ) ಮಸ್ಕಿಯ ಮಹಿಳಾ ಪದವಿ ಪೂರ್ವ ಕಾಲೇಜು 2006–07ನೇ ಸಾಲಿನಲ್ಲಿ ಪ್ರಾರಂಭವಾಗಿದ್ದು, ಸದ್ಯಕ್ಕೆ ಸದರಿ ಕಾಲೇಜು ಪ್ರೌಢಶಾಲಾ ಕಟ್ಟಡದಲ್ಲಿ ನಡೆಯುತ್ತಿರುತ್ತದೆ. ಸದರಿ ಕಾಲೇಜಿನಲ್ಲಿ ಪ್ರಥಮ ವರ್ಷದಲ್ಲಿ 95 ವಿದ್ಯಾರ್ಥಿನಿಯರು, ದ್ವಿತೀಯ ವರ್ಷದಲ್ಲಿ 76 ವಿದ್ಯಾರ್ಥಿನಿಯರು ದಾಖಲಾತಿ ಹೊಂದಿರುತ್ತಾರೆ. ಈ ಕಾಲೇಜಿಗೆ ಸ್ವಂತ ಕಟ್ಟಡ ನಿರ್ಮಾಣಕ್ಕಾಗಿ ನಬಾರ್ಡ್ ಯೋಜನೆಯ ಆರ್.ಐ.ಡಿ.ಎಫ್–12ರಡಿ 36.00 ಲಕ್ಷ ರೂ.ಗಳನ್ನು ಮಂಜೂರು ಮಾಡಲಾಗಿದೆ. ನಿವೇಶನ ಲಭ್ಯವಿಲ್ಲದೇ ಇದ್ದುದರಿಂದ ಕಟ್ಟಡ ಕಾಮಗಾರಿಯನ್ನು ಪ್ರಾರಂಭಿಸಿರಲಿಲ್ಲ. ಈಗ ಪ್ರೌಢಶಾಲಾ ಆವರಣದಲ್ಲಿ ಕಟ್ಟಡವನ್ನು ನಿರ್ಮಿಸಲು ಆದೇಶಿಸಲಾಗಿದೆ.

ಶ್ರೀ ಪ್ರತಾಪಗೌಡ ಪಾಟೀಲ್ : ಮಾನ್ಯ ಸಭಾಧ್ಯಕ್ಷರೆ, ಮಸ್ಕಿ ಮಹಿಳಾ ಪದವಿಪೂರ್ವ ಕಾಲೇಜು ಕಟ್ಟಡವು ನವೆಂಬರ್‌ನಲ್ಲಿ 29 ಲಕ್ಷ ರೂಪಾಯಿಗಳಿಗೆ ಟೆಂಡರ್ ಕರೆದಿದ್ದು, ಇದು ಫೆಬ್ರವರಿಯಲ್ಲಿ 26 ಲಕ್ಷ ರೂಪಾಯಿಗಳಿಗೆ ಅಂದರೆ, 26 ಪರ್ಸೆಂಟ್ ಲೆಸ್ ಆಗಿ ಟೆಂಡರ್ ತೆಗೆದುಕೊಂಡು 26 ಲಕ್ಷ ರೂಪಾಯಿಗಳಿಗೆ ಅಗ್ರಿಮೆಂಟ್ ಮಾಡಿದ್ದಾರೆ. ಆದರೆ, ಇದುವರೆಗೆ ಕೆಲಸ ಪ್ರಾರಂಭಿಸಿಲ್ಲ. ಇದಕ್ಕೆ ಅವರು ಕೊಟ್ಟಿರುವ ಕಾರಣವೇನೆಂದರೆ, ನಿವೇಶನ ಲಭ್ಯವಿಲ್ಲವೆಂದು ಹೇಳಿರುವುದು. ಇದು ಸುಳ್ಳು, ಕಾರಣ, ಈಗ ಕಡಿಮೆ ಟೆಂಡರ್ ಕೋಟ್ ಮಾಡಿರುವುದರಿಂದ ಅವರು ಈ ನೆಪವೊಡ್ಡಿ ಹೆಚ್ಚಿನ ಅಗ್ರಿಮೆಂಟ್‌ಗೆ ಒತ್ತಾಯಿಸುತ್ತಾ ಕ್ಲಾಜ್ 15ರಡಿಯಲ್ಲಿ ಹೆಚ್ಚಿನ